(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರರವರ ನ್ಯಾಯಾಲಯ ಹೊಸಪೇಟೆ

ಸಂ/ಕಂ/ಪಹಣಿ ಅಪೀಲು/36/2016-17 ದಿನಾಂಕ:29.07.2016.

## ಹಿಂಬರಹ

ವಿಷಯ: ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1325/ಬಿ ವಿಸ್ತೀರ್ಣ: 04 ಎಕರೆ 15 ಸೆಂಟ್ಸ್, ಜಮೀನಿಗೆ ಸಂಬಂಧಿಸಿದಂತೆ ಎಂ.ಆರ್.ನಂ.: ಹೆಚ್.65/2015-16 ದಿನಾಂಕ:13.08.2015 ರ ಆದೇಶದ ವಿರುದ್ಧ ಹಕ್ಕು ಬದಲಾವಣೆಗಾಗಿ ಮೇಲ್ಮನವಿಯನ್ನು ಸಲ್ಲಿಸಿದ ಬಗ್ಗೆ.

ಉಲ್ಲೇಖ: ಶ್ರೀ ಪವನ್ ಸಾಗರ್, ವಕೀಲರು, ಹೊಸಪೇಟೆ ಇವರ ಸಲ್ಲಿಸಿದ ಅರ್ಜಿ.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮನವಿಯಲ್ಲಿ ಕೋರಿರುವ ಮೇರೆಗೆ ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1325/ಬಿ ವಿಸ್ತೀರ್ಣ: 04 ಎಕರೆ 15 ಸೆಂಟ್ಸ್, ಜಮೀನಿಗೆ ಸಂಬಂಧಿಸಿದಂತೆ ಎಂ.ಆರ್.ನಂ.: ಹೆಚ್.65/2015-16 ದಿನಾಂಕ:13.08.2015 ರ ಆದೇಶದ ವಿರುದ್ಧ ಹಕ್ಕು ಬದಲಾವಣೆಗಾಗಿ ಮೇಲ್ಮನವಿ ಸಲ್ಲಿಸಿರುತ್ತೀರಿ.

ಸದರಿ ಅರ್ಜಿಯನ್ನು ಪರಿಶೀಲಿಸಲಾಗಿ, ಈಗಾಗಲೇ ತಾವು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ:121/2012-13 ರನ್ವಯ ಪ್ರಕರಣ ದಾಖಲಾಗಿದ್ದು, ದಿನಾಂಕ:12.08.2015 ರಂದು ಅಂತಿಮ ಆದೇಶವಾಗಿದ್ದು, ಸದರಿ ಆದೇಶದಲ್ಲಿ ವಾದಿಯಾಗಿದ್ದ ತಮ್ಮ ದಾವೆಯನ್ನು ವಜಾಗೊಳಿಸಿ ಎಂ.ಆರ್.ನಂ.27/1991-92 ರಲ್ಲಿ ಆದೇಶಿಸಿದ ವಿಸ್ತೀರ್ಣ:04 ಎಕರೆ 15 ಸೆಂಟ್ಸ್ ನ್ನು ವಜಾಗೊಳಿಸಲಾಗಿದೆ. ಆದರೆ ಸದರಿ ಸ.ನಂ.1325/ಬಿ ಕೇವಲ ವಿಸ್ತೀರ್ಣ:05 ಎಕರೆ 00 ಸೆಂಟ್ಸ್ ಜಮೀನಿಗೆ ಮಾತ್ರ ಸೀಮಿತಗೊಂಡಿದ್ದು, ಆದರೆ ಸದರಿ ವ್ಯಾಜ್ಯದ ಜಮೀನಿನಲ್ಲಾದ ಕ್ರಯ ವ್ಯವಹಾರಗಳ ಪ್ರಕಾರ ವಿಸ್ತೀರ್ಣ:05 ಎಕರೆ 95 ಸೆಂಟ್ಸ್ ಎಕರೆ ಇದ್ದು, ಕ್ರಯ ಹೊಂದಿರುವವರಿಗೆ ವೈಯಕ್ತಿಕವಾಗಿ ಬರುವ ವಿಸ್ತೀರ್ಣವನ್ನು ನಿರ್ಧರಿಸಬೇಕಾಗಿದ್ದು, ಪಹಣಿ ತಿದ್ದುಪಡಿಯಾಗಬೇಕಾಗಿರುತ್ತದೆಂದು ಈ ಬಗ್ಗೆ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಎಲ್ಲಾ ಪಕ್ಷಗಾರರಿಗೆ ಅವಕಾಶ ನೀಡಿ ಪ್ರಕರಣವನ್ನು ವಿಲೇಗೊಳಿಸಲು ಸೂಚಿಸಿ ಸದರಿ ಅಪೀಲನ್ನು ಹಿಂದಿರುಗಿಸಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಆದೇಶದ ಪ್ರಕಾರ ತಹಶೀಲ್ದಾರರು, ಹೊಸಪೇಟೆ ಇವರು ಪಹಣಿ ಬದಲಾವಣೆ ಮಾಡಿರುವುದಾಗಿ ವಾದಿಪರ ವಕೀಲರು ತಿಳಿಸಿದ್ದು ಈ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ತಮ್ಮ ಹಕ್ಕನ್ನು ಸಾಬೀತುಪಡಿಸುವಲ್ಲಿ ಯಾವುದೇ ಪೂರಕ ದಾಖಲೆಗಳನ್ನು ಸಲ್ಲಿಸದೇ ಕೇವಲ ಪಹಣಿಗಳನ್ನು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ.

**ಈ ಬಗ್ಗೆ ಪರಿಶೀಲಿಸಲಾಗಿ, ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.**

1. ವಾದಿಯಾದ ಶ್ರೀಮತಿ ಗೌಳೇರ ಗಂಗಮ್ಮ ಇವರ ಕುಟುಂಬದ ವಂಶವೃಕ್ಷದ ದಾಖಲೆ ಸಲ್ಲಿಸಿರುವುದಿಲ್ಲ.
2. ವಾದಿಯಾದ ಶ್ರೀಮತಿ ಗೌಳೇರ ಗಂಗಮ್ಮ ಇವರು ವ್ಯಾಜ್ಯದ ಜಮೀನಿನ ಮೇಲೆ ಹೊಂದಿರುವ ಹಕ್ಕಿನ ಬಗ್ಗೆ ಯಾವುದೇ ರೀತಿಯ ಕ್ರಯ ಪತ್ರ ಹಾಗೂ ಇ.ಸಿ. ಪ್ರತಿಯನ್ನು ಹಾಗೂ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.
3. ಸದರಿ ಪ್ರಶ್ನಿತ ಹಕ್ಕು ಬದಲಾವಣೆಯ ಆದೇಶದ ಪ್ರತಿಯನ್ನು ಸಹ ಸಲ್ಲಿಸಿರುವುದಿಲ್ಲ.
4. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಇತರೆ ಯಾವುದೇ ಸೂಕ್ತ ದಾಖಲೆಗಳ ದೃಢೀಕೃತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.
5. ಡಯಾಗ್ಲಾಟ್ ಪ್ರತಿಯನ್ನು ಸಲ್ಲಿಸಿರುವುದಿಲ್ಲ.

ಈ ಬಗ್ಗೆ ತಮ್ಮ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಹಂತದಲ್ಲಿ ಪಹಣಿ - ಅಪೀಲು ಶಾಖೆಯಿಂದ ಮುಂದಿನ ಕ್ರಮದ ಅವಶ್ಯಕತೆ ಇರುವುದಿಲ್ಲ, ಕಾರಣ, ಈ ಬಗ್ಗೆ ತಾವು ಸೂಕ್ತ ದಾಖಲೆಗಳೊಂದಿಗೆ ಪಹಣಿ ತಿದ್ದುಪಡಿಯಲ್ಲಿ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳು ಈ ಮೂಲಕ ಸೂಚಿಸಿದೆ.

ಸಹಾಯಕ ಆಯುಕ್ತರು,
ಹೊಸಪೇಟೆ.

ಸಹಾಯಕ ಆಯುಕ್ತರು
ಹೊಸಪೇಟೆ.

Received. Adv 1/8/16

ಪ್ರತಿಯನ್ನು:- ಶ್ರೀ ಪವನ್ ಸಾಗರ್, ವಕೀಲರು, ಹೊಸಪೇಟೆ ಇವರಿಗೆ.